KAMD720007972013

1

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ. ದಂಡಾಧಿಕಾರಿಗಳು ಇವರ ನ್ಯಾಯಾಲಯ, ಶ್ರೀರಂಗಪಟ್ಟಣ.

**ಸಿ. ಸಿ. ನಂ. 193/2013**

**ದಿನಾಂಕ : 06.07.2026**

| | |
|---|---|
| ಪಿರ್ಯಾದುದಾರರು: | ರಾಜ್ಯ ಪೋಲೀಸರು, ಅರಕೆರೆ ಪೋಲಿಸ್ ಠಾಣೆ. |

-: ವಿರುದ್ಧ:-

| | |
|---|---|
| ಆರೋಪಿ: | ಬಿ.ಎನ್.ನಾರಾಯಣ ಜೆ.ಇ,<br>ಸಿ.ಇ.ಎಸ್.ಸಿ. ಕೊಡಿಯಾಲಶಾಖೆ<br>ಅರಕೆರೆ ಹೋಬಳಿ,<br>ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ |

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿ ಹೇಳಿ**

ಪ್ರ.1) : ಈ ಮೊಕದ್ದಮೆಯಲ್ಲಿ ಸಾಕ್ಷಿದಾರರು ಹೇಳಿರುವ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿರುವಿರಾ?

ಉ.

ಪ್ರ.2) ಪ್ರಾಸಾ-1 ಭಾಸ್ಕರ್ ರವರು, ತಮ್ಮ ಸಾಕ್ಷ್ಯದಲ್ಲಿ ಮೃತ ಪ್ರಸನ್ನ ರವರು ನನಗೆ ಗೊತ್ತು. ಅವರು ಕರೆಂಟ್ ಶಾಕ್ ನಿಂದ ಸತ್ತಿದ್ದಾರೆ. ದಿ: 10.12.2012 ರಂದು ಬೆಳಿಗ್ಗೆ 08.00-08.30 ಸಮಯದಲ್ಲಿ ಪಿ.ಹಳ್ಳಿಯ ದೇವಸ್ಥಾನದ ಹತ್ತಿರ ಕಬ್ಬಿನ ಗದ್ದೆಯ ಹತ್ತಿರ ನಾನು ಮತ್ತು ಮೃತ ಪ್ರಸನ್ನ ರವರು ಎಳನೀರು ಕುಯಿವ ಸಲುವಾಗಿ ಹೋಗುತ್ತಿದ್ದೇವು. ಅಲ್ಲಿ ಕಟ್ ಆಗಿದ್ದ ಕರೆಂಟ್ ವೈರ್ ನೆಲದ ಮೇಲೆ ಬಿದ್ದಿತ್ತು. ನನ್ನ ಮುಂದೆ ಪ್ರಸನ್ನ ನಡೆದುಕೊಂಡು ಹೋಗುತ್ತಿದ್ದಾಗ ಬಿದಿದ್ದ ಕರೆಂಟ್ ವೈರ್ ಆತನ ಕಾಲಿಗೆ ತಗುಲಿ ಅವನಿಗ ಶಾಕ್ ಹೊಡೆಯಿತು. ಶಾಕ್ ಹೊಡೆದು ಆತ ಬಿದ್ದು ಒದಾಡುತ್ತಿದ್ದ ಆಗ ನಾನು ಅಲ್ಲಿಂದ ಹೊರಟುಹೋದೆ. ಅದೇ ದಿನ ಬೆಳಿಗ್ಗೆ 10.00-10.15 ಗಂಟೆ ಸಮಯದಲ್ಲಿ ಘಟನೆ ಸಂಬಂಧ ನಾನು ಪೋಲೀಸರಿಗೆ ದೂರನ್ನು ನೀಡಿದ್ದೇನೆ. ನಂತರ ಪೋಲೀಸರು 10.30-11.00 ಗಂಟೆ ಸಮಯದಲ್ಲಿ ಬಂದು ಮಹಜರ್ ಮಾಡಿರುತ್ತಾರೆ. ನಾನು ಮಹಜರ್ ಗೆ ಸಹಿ ಮಾಡಿದ್ದೇನೆ. ನನ್ನ ಸಂಗಡ ಮಹಜರ್ ಗೆ ನಿಂಗಯ್ಯ ಮತ್ತು ಶ್ರೀಧರ್ ಸಹಿ ಮಾಡಿರುತ್ತಾರೆ. ಘಟನಾ ಸ್ಥಳದಿಂದ ಪೋಲೀಸರು ಮೃತ ಪ್ರಸನ್ನ ಶವವನ್ನು ಹಾಗೂ ಆತನಿಗೆ ಸಂಬಂಧಪಟ್ಟ ಮೊಬೈಲ್ ಅನ್ನು ತೆಗೆದುಕೊಂಡು ಹೋಗಿರುತ್ತಾರೆ. ವಿದ್ಯುತ್

ಇಲಾಖೆಯವರ ತಪ್ಪಿನಿಂದ ಪ್ರಸನ್ನ ಮೃತನಾಗಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ.

ಪ್ರ.3) ಪ್ರಾಸಾ-2 ಶ್ರೀಧರ್ ರವರು, ತಮ್ಮ ಸಾಕ್ಷ್ಯದಲ್ಲಿ ಮೃತ ಪ್ರಸನ್ನ ರವರು ನನಗೆ ಗೊತ್ತು. ಭಾಸ್ಕರ ಹಾಗೂ ನಿಂಗಯ್ಯ ನನಗೆ ಗೊತ್ತು. ಪ್ರಸನ್ನರವರು ಕರೆಂಟ್ ಶಾಕ್ ನಿಂದ ಸತ್ತಿದ್ದಾರೆ. ಸುಮಾರು 10 ವರ್ಷಗಳ ಹಿಂದೆ ಬೆಳಿಗ್ಗೆ 08.00 ಗಂಟೆ ಸಮಯದಲ್ಲಿ ಪಿ.ಹಳ್ಳಿಯ ಕರಿಯಪ್ಪನವರ ತೋಟದ ಹತ್ತಿರ ಎಳನೀರು ಕುಯ್ಯಿಯಲು ನಾನು, ಭಾಸ್ಕರ್ ಹಾಗೂ ನಿಂಗಯ್ಯ, ಪ್ರಸನ್ನ ರವರ ಜೊತೆ ಹೋಗಿದ್ದೇವು. ಅಲ್ಲಿ ಕಟ್ ಆಗಿದ್ದ ಕರೆಂಟ್ ವೈರ್ ನೆಲದ ಮೇಲೆ ಬಿದ್ದಿತ್ತು. ಪ್ರಸನ್ನ ನಡೆದುಕೊಂಡು ಹೋಗುತ್ತಿದ್ದಾಗ ಬಿದಿದ್ದ ಕರೆಂಟ್ ವೈರ್ ಆತನ ಕಾಲಿಗೆ ತಗುಲಿ ಅವನಿಗ ಶಾಕ್ ಹೊಡೆಯಿತು. ಶಾಕ್ ಹೊಡೆದು ಆತ ಮೃತನಾಗಿರುತ್ತಾನೆ. ವಿದ್ಯುತ್ ಇಲಾಖೆಯವರ ತಪ್ಪಿನಿಂದ ಪ್ರಸನ್ನ ಮೃತನಾಗಿರುತ್ತಾನೆ. ಪ್ರಸನ್ನ ಶಾಕ್ ಹೊಡೆದು ಮೃತ ಪಟ್ಟಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ.

ಪ್ರ.4) ಪ್ರಾಸಾ3 ನಿಂಗಯ್ಯ ರವರು, ತಮ್ಮ ಸಾಕ್ಷ್ಯದಲ್ಲಿ ಮೃತ ಪ್ರಸನ್ನ ರವರು ನನಗೆ ಗೊತ್ತು. ಭಾಸ್ಕರ ಹಾಗೂ ಶ್ರೀಧರ್ ನನಗೆ ಗೊತ್ತು. ಪ್ರಸನ್ನರವರು ಕರೆಂಟ್ ಶಾಕ್ ನಿಂದ ಸತ್ತಿದ್ದಾರೆ. ಸುಮಾರು 6-7 ವರ್ಷಗಳ ಹಿಂದೆ ಬೆಳಿಗ್ಗೆ 08.00-08.30 ಗಂಟೆ ಸಮಯದಲ್ಲಿ ಪಿ.ಹಳ್ಳಿಯ ಕರಿಯಪ್ಪನವರ ತೋಟದ ಹತ್ತಿರ ಎಳನೀರು ಕುಯ್ಯಿಯಲು ನಾನು, ಭಾಸ್ಕರ್ ಹಾಗೂ ಶ್ರೀಧರ್, ಪ್ರಸನ್ನ ರವರ ಜೊತೆ ಹೋಗಿದ್ದೇವು. ನಮ್ಮ ಮುಂದೆ ಪ್ರಸನ್ನ ನಡೆದುಕೊಂಡು ಹೋಗುತ್ತಿದ್ದರು. ಪ್ರಸನ್ನ ನಡೆದುಕೊಂಡು ಹೋಗುತ್ತಿದ್ದಾಗ ಬಿದಿದ್ದ ಕರೆಂಟ್ ವೈರ್ ಆತನ ಕಾಲಿಗೆ ತಗುಲಿ ಅವನಿಗ ಶಾಕ್ ಹೊಡೆಯಿತು. ಶಾಕ್ ಹೊಡೆದು ಆತ ಮೃತನಾಗಿರುತ್ತಾನೆ. ವಿದ್ಯುತ್ ಇಲಾಖೆಯವರ ತಪ್ಪಿನಿಂದ ಪ್ರಸನ್ನ ಮೃತನಾಗಿರುತ್ತಾನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ.

ಪ್ರ.5) ಪ್ರಾಸಾ-6 ಅಲ್ತಾಫ್ ಹುಸೇನ್ ಜಕಾರ್ತಿ ರವರು, ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ10.12.2012 ರಂದು ಶ್ರೀ ಪ್ರಸನ್ನ ಬಿನ್ ರಾಮೇಗೌಡ ರವರಿಗೆ ಶ್ರೀರಂಗಪಟ್ಟಣ ತಾಲೂಕಿನ ಪಿ.ಹಳ್ಳಿ ಗ್ರಾಮದಲ್ಲಿ ಕರೀಗೌಡ ರವರ ಕಬ್ಬಿನ ಗದ್ದೆಯಲ್ಲಿ ಸಂಭವಿಸಿದ ಮಾರಾಣಾಂತಿಕ ವಿದ್ಯುತ್ ಅಪಘಾತದ ಬಗ್ಗೆ ದಿನಾಂಕಃ10.12.2012 ರಂದು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ಶ್ರೀರಂಗಪಟ್ಟಣ ರವರಿಗಂದ ವಿಷಯ ತಿಳಿದು ದಿನಾಂಕಃ11.12.2012 ರಂದು ಅಪಘಾತದ ಸ್ಥಳದ ಪರಿವೀಕ್ಷಣೆ ನಡೆಯಿಸಿ ಸದರಿ ಅಪಘಾತದ ಬಗ್ಗೆ ದಿನಾಂಕಃ30.03.2013 ರದಯಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ.

ಪ್ರ.6) ಪ್ರಾಸಾ-6 ರವರು, ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನನ್ನ ವರದಿಯಲ್ಲಿ ದಿನಾಂಕಃ10.12.2012 ರ ಹಿಂದಿನ ರಾತ್ರಿ ತೆಂಗಿನ ಮರದ ಗರಿಯೊಂದು ಎಲ್ ಟಿ ಮಾರ್ಗದ ಮೇಲೆ ಬಿದ್ದ ಪರಿಣಾಮ ಆರ್.ಫೇಸ್ ವಾಹಕ ತುಂಡಾಗಿ ಕೆಳಕ್ಕೆ ಬಿದು ಸದರಿ ವಾಹಕವನ್ನು ಅಕಸ್ಮಿಕವಾಗಿ ಮೃತ ಪ್ರಸನ್ನ ಸಂಪರ್ಕಕ್ಕೆ ಬಂದ ಕಾರಣ ಈ ಅಪಘಾತ ಸಂಭವಿಸಿದೆ ಎಂದು ಅಭಿಪ್ರಾಯ ಪಟ್ಟಿರುತ್ತೇನೆ. ಸರಬರಾಜುದಾರರು ಎಲ್ ಟಿ ಮಾರ್ಗದ ಹತ್ತಿರ ಇದ್ದ ಗಿಡ ಮರಗಳನ್ನು ಕಡಿಸಿದ್ದರೆ ಹಾಗುಾ ಪರಿವರ್ತಕ ಕೇಂದ್ರದಲ್ಲಿ ಸೂಕ್ತ ಸಾರ್ಮಥ್ಯದ ಫ್ಯೂಸ್ ಗಳನ್ನು ಅಳವಡಿಸಿದ್ದರೆ ಸದರಿ ಅಪಘಾತವನ್ನು ತಪ್ಪಿಸಬಹುದಾಗಿತ್ತು ಎಂದು ಅಭಿಪ್ರಾಯ ಪಟ್ಟಿದು, ಭಾರತೀ ವಿದ್ಯುಚ್ಛಕ್ತಿ ನಿಯಮಗಳು 1956 ರ ನಿಯಮ 29 ಹಾಗೂ 91 ರ ಉಲ್ಲಂಘನೆಯಾಗಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ.

ಪ್ರ.7) ಪ್ರಾಸಾ-8 ರಘು ರವರು, ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ1012.2012 ರಂದು ಕರೀಗಬಡರ ತೋಟದಲ್ಲಿ ವಿದ್ಯುಚ್ಛಕ್ತಿ ಲೈನ್ ಬಿದ್ದು ಹೋಗಿ ಪ್ರಸನ್ನ ಎಂಬ ಹುಡುಗ ತೀರಿಕೊಂಡಿರುತ್ತಾರೆ. ಆ ಸಂದರ್ಭದಲ್ಲಿ ಪೋಲೀಸರು ಮಹಜರು ಮಾಡಲು ಬಂದಿದ್ದು, ವಿದ್ಯುಚ್ಛಕ್ತಿ ತಂತಿಯನ್ನು ವಶಪಡಿಸಿಕೊಂಡಿರುತ್ತಾರೆ. ಅದಿನ ಸಂಜೆ 3.00 ರಿಂದ 4.00

ಗಂಟೆಯವರೆಗೆ ಪೋಲೀಸರು ಮಹಜರು ಮಾಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ.

ಪ್ರ.8) ಪ್ರಾಸಾ-9 ಎಂ.ಎನ್.ಪೂಣಚ್ಚ/ಪಿ.ಐ. ರವರು, ತಮ್ಮ ಸಾಕ್ಷ್ಯದಲ್ಲಿಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 10.12.2012 ರಂದು ಬೆಳಿಗ್ಗೆ 10.00 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ನಮ್ಮ ಠಾಣಾ ಮೊಕದ್ದಮೆ ಸಂಃ 234/2012 ರಂತೆ ಪ್ರಕರಣ ದಾಖಲಿಸಿರುತ್ತೇನೆ ಮತ್ತು ಪ್ರ.ವ.ವರದಿನ್ನು ನ್ಯಾಯಾಲಯಕೆ ಸಲ್ಲಿಸಿರುತ್ತೇನೆ. ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ ಚಾಸಾ.1 ರವರು ತೋರಿಸಿದ ಚಾಸಾ.12 ರಿಂದ 15 ರವರ ಸಮಕ್ಷಮ ಅದೇ ದಿನ ಮಧ್ಯಾಹ್ನ 03.00-03.30 ರವರೆಗೆ ಸ್ಥಳ ಪಂಚನಾಮೆ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ನೋಡಿದರೆ ಗುರುತಿಸುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ.

ಪ್ರ.9) ಪ್ರಾಸಾ-9 ರವರು, ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಸದರಿ ಪಂಚನಾಮೆ ಕಾಲಕ್ಕೆ ಅಲುಮಿನಿಯಂ ವಿದ್ಯುತ್ ತಂತಿಯನ್ನು ವಶಪಡಿಸಿಕೊಂಡಿರುತ್ತೇನೆ. ಸದರಿ ವಿದ್ಯುತ್ ತಂತಿಯನ್ನು ನೋಡಿದರೆ ಗುರುತಿಸುತ್ತೇನೆ. ನಂತರ ಸದರಿ ವಿದ್ಯುತ್ ತಂತಿಯನ್ನು ನಮ್ಮ ಠಾಣಾ ಪಿ.ಎಫ್.ನಂ.146/2012 ರಂತ ನಮೂದಿಸಿ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ವಿದ್ಯುತ್ ತಂತಿಯನ್ನು ನ್ಯಾಯಾಲಯದ ಮುಂದಿರುವ ತಂತಿಯಾಗಿರುತ್ತದೆ.ದಿಃ 10.12.2012 ರಂದು ಕೃತ್ಯ ನಡೆದ ಸ್ಥಳದಲ್ಲಿ ಮೃತ ಪ್ರಸನ್ನ ಬಿನ್ ರಾಮೇಗೌಡ ರವರ ಚಾಸಾ.4 ರಿಂದ 6 ರವರ ಸಮಕ್ಷಮ ಶವ ತನಿಖೆಯನ್ನು ಮಾಡಿರುತ್ತೇನೆ. ಅದೇ ದಿನ ಮೃತರ ಸಂಬಂಧಿಕರಾದ ಚಾಸಾ.7 ರಿಂದ 9 ರವರನ್ನು ವಿಚಾರಿಸಿ ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ.

ಸದರಿ ಸ್ಥಳದಲ್ಲಿ ಸದರಿ ಕೃತ್ಯಕ್ಕೆ ಸಂಬಂಧಿಸಿದಂತೆ 6 ಪೋಟೋಗಳನ್ನು ತೆಗೆಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ.

ಪ್ರ.10) ಪ್ರಾಸಾ-9 ರವರು, ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು , ನಂತರ ಸದರಿ ಮೃತನ ಶವ ತನಿಖೆ ಮತ್ತು ಶವ ಪಂಚನಾಮೆ ಮತ್ತು ಶವದ ಮರಣೋತ್ತರ ಪರೀಕ್ಷೆ ಮುಗಿದ ನಂತರ ಸದರಿ ಮೃತ ದೇಹವನ್ನು ಚಾಸಾ.7 ರವರಿಂದ ಸ್ವೀಕೃತಿ ಪಡೆದು ಅವರ ವಶಕ್ಕೆ ನೀಡಿರುತ್ತೇನೆ. ನಂತರ ಚಾಸಾ.2, 3, 11 ರವರನ್ನು ವಿಚಾರಿಸಿ ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 20.12.2012 ರಂದು ಚಾಸಾ.18 ರವರಿಂದ ಸದರಿ ಮೃತ ಪ್ರಸನ್ನ ಬಿನ್ ರಾಮೇಗೌಡ ರವರ ಪಿ.ಎಂ.ವರದಿಯನ್ನು ಸ್ವೀಕರಿಸಿ ಪರಿಶೀಲಿಸಿ ನನ್ನ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ.

ಪ್ರ.11)ಪ್ರಾಸಾ-9 ರವರು, ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿಃ 10.12.2012 ರಂದು ನಾನು ಚಾಮುಂಡೇಶ್ವರಿ ವಿದ್ಯುತ ಸರಬರಾಜು ನಿಗಮಕ್ಕೆ ಸಂಬಂಧಿಸಿದಂತೆ ದಿಃ 10.12.2012 ರಂದು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯ ನಿರ್ವಹಿಸಿದ ಇಂಜಿನಿಯರ್ ರವರ ವಿವರವನ್ನು ಕೋರಿ ಮನವಿ ಪತ್ರವನ್ನು ಸಲ್ಲಿಸಿರುತ್ತೇನೆ.ದಿಃ 02.04.2013 ರಂದು ಚಾಮುಂಡೇಶ್ವರಿ ವಿದ್ಯುತ ಸರಬರಾಜು ನಿಗಮದಿಂದ ಡಿಸೆಂಬರ್ 2012 ರ ಅಟೆಂಡೆನ್ಸ್ ರಿಜಿಸ್ಟರ್ ನ ದೃಢೀಕೃತ ಪ್ರತಿಯನ್ನು ಸ್ವೀಕರಿಸಿರುತ್ತೇನೆ.ದಿಃ 19.04.2013 ರಂದು ತನಿಖೆ ಪೂರ್ಣಗೊಂಡಿದ್ದರಿಂದ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಧಾರಗಳು ಇದ್ದುದರಿಂದ ನ್ಯಾಯಾಲಯಕ್ಕೆ ದೋಷಾಪರೋಪಣಾ ಪತ್ರ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ ಇದಕ್ಕೆ ನೀವೇನು ಹೇಳುವಿರಿ?

ಉ.

ಪ್ರ.12) ಈ ಕೇಸಿನ ಬಗ್ಗೆ ನೀವು ಇನ್ನೂ ಹೇಳುವುದು ಏನಾದರೂ ಇದೆಯಾ?

ಉಃ

ಪ್ರ.13) ನಿಮ್ಮ ಪರ ಸಾಕ್ಷಿದಾರರು ಇದ್ದಾರೆಯೆ? ಅವರ ವಿಚಾರಣೆ ಆಗಬೇಕೆ?

ಉಃ

14)ನಿಮ್ಮ ಪರ ದಾಖಲೆಗಳು ಏನಾದರೂ ಇದೆಯಾ? ಅವುಗಳನ್ನು ಹಾಜರುಪಡಿಸಿಸುವಿರಾ?

ಉಃ

ಮೇಲ್ಕಂಡ ಸಾಕ್ಷಿದಾರರ ಹೇಳಿಕೆಗಳನ್ನು ತೆರೆದ ನ್ಯಾಯಲಯದಲ್ಲಿ ನನ್ನ ಎದುರು ಆರೋಪಿತರಿಗೆ ತಿಳಿದ ಭಾಷೆಯಾದ ಕನ್ನಡದಲ್ಲಿ ಓದಿ ಹೇಳಲಾಗಿದೆ ಹಾಗೂ ಆರೋಪಿತರ ಹೇಳಿದ ಉತ್ತರಗಳನ್ನು ಯಥವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸಲಾಗಿದೆ.

(ಉಮೇಶ.ಎಮ್.ಪಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ, ಶ್ರೀರಂಗಪಟ್ಟಣ.

ಆರೋಪಿ ಸಹಿಃ